ಪಿ.ಡಬ್ಲ್ಯೂ-1

**ದಿನಾಂಕಃ 27-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಪಿ.ಎಂ.ಬಿ., ಪ್ರತಿವಾದಿ ಪರ ವಕೀಲರಿಂದಃ**

ನಾನು ವ್ಯವಸಾಯ ಮಾಡುತ್ತೇನೆ. ನನ್ನದು ಡಿಪ್ಲೋಮಾ ಮೆಕ್ಯಾನಿಕಲ್ ಪದವಿದರನಾಗಿರುತ್ತೇನೆ. ಮೆಕ್ಯಾನಿಕಿಗೆ ಸಂಬಂಧಿಸಿದಂತೆ ಪದವಿ ಪಡೆದಿರುತ್ತೇನೆ. ನಾನು ವ್ಯವಸಾಯವನ್ನು ಹೊರತುಪಡಿಸಿ ಭತ್ತದ ವ್ಯಾಪಾರ ಮಾಡುತ್ತೇನೆ. ಹಾವೇರಿ, ರಾಣೇಬೆನ್ನೂರ, ಡಾವಣಗೆರೆ 03 ಎಪಿಎಂಸಿಗಳಿಂದ ಭತ್ತ ವ್ಯಾಪಾರ ಮಾಡಲು ಲೈಸೆನ್ಸ ಪಡೆದಿರುತ್ತೇನೆ. ಭತ್ತವಲ್ಲದೇ ಕಾಳುಗಳ ಮಾರಾಟ ಮಾಡುತ್ತೇನೆ ಅದಕ್ಕೂ ಸಹ ಲೈಸೆನ್ಸ ಪಡೆದಿರುತ್ತೇನೆ. ನಿಮ್ಮ ಪ್ರಮಾಣಪತ್ರದಲ್ಲಾಗಲೀ, ವಾದ ಪತ್ರದಲ್ಲಾಗಲೀ ವ್ಯಾಪಾರ ಮಾಡುತ್ತೇನೆ ಅಂತಾ ಬರೆಸಿರುವುದಿಲ್ಲ ಅಂದರೆ ಬರೆಸಿಲ್ಲ. ನನ್ನ ಹೆಸರಿನಲ್ಲಿ 04 ಎಕರೆ ಜಮೀನು ಮುದೇನೂರ ಗ್ರಾಮದಲ್ಲಿ ಇರುತ್ತದೆ. ಸರ್ವೆ ನಂಬರ 16/2, 11/1ಬ ಎರಡು ಜಮೀನುಗಳು ಮುದೇನೂರ ಗ್ರಾಮದಲ್ಲಿ ಇರುತ್ತವೆ. ಜಮೀನುಗಳು ಪಿತ್ರಾರ್ಜಿತ ಆಸ್ತಿಯಿಂದ ಬಂದಿರುತ್ತವೆ.

**2.** ಈ ಆಸ್ತಿ ಹೊರತುಪಡಿಸಿ ಬೇರೆ ಊರಿನಲ್ಲಿ ಆಸ್ತಿ ಮಾಡಿರುತ್ತೀರಾ ಅಂದರೆ ರಾಣೇಬೆನ್ನೂರನಲ್ಲಿ ಮತ್ತು ಡಾವಣಗೇರೆಯಲ್ಲಿ ಖರೀದಿ ಮಾಡಿರುತ್ತೇನೆ. ರಾಣೇಬೆನ್ನೂರನಲ್ಲಿ ಖರೀದಿ ಮಾಡಿರುವುದು ಎನ್.ಎ. ಪ್ಲಾಟ ಇದ್ದು, ಸರ್ವೆ ನಂಬರ ಗೊತ್ತಿರುವುದಿಲ್ಲ. ಅದರ ಪ್ಲಾಟ ನಂಬರ 32 ಇದ್ದು, ಅಳತೆ 60x40 ಇರುತ್ತದೆ. ಡಾವಣಗೆರೆ ತಾಲ್ಲೂಕ ಮಾಳಗೊಂಡನಹಳ್ಳಿ 07 ಗುಂಟೆ ಆಸ್ತಿ ಇದ್ದು ಅದರ ಸರ್ವೆ ನಂಬರ ಗೊತ್ತಿರುವುದಿಲ್ಲ. ರಾಣೇಬೆನ್ನೂರ ಮತ್ತು ಡಾವಣಗೆರೆಯಲ್ಲಿ ಆಸ್ತಿಯನ್ನು ಹೊರತುಪಡಿಸಿ ಬೇರೆ ಎಲ್ಲಿಯೂ ಖರೀದಿ ಮಾಡಿರುವುದಿಲ್ಲ. ಮುದೇನೂರನಿಂದ ಹಾವೇರಿಗೆ ಬರಬೇಕಾದರೆ ರಾಣೇಬೆನ್ನೂರ ಮೇಲೆ ಬರಬೇಕು ಅಂದರೆ ಹೌದು. ಮುದೇನೂರನಿಂದ ದೇವಗಿರಿ-ಯಲ್ಲಾಪುರ ಗ್ರಾಮಕ್ಕೆ ಅಂದಾಜು 70 ಕಿಮೀ ಅಂತರ ಇರುತ್ತದೆ.

ಪಿ.ಡಬ್ಲ್ಯೂ-1

**3.** ವ್ಯವಸಾಯ ಮಾಡುವ ಉದ್ದೇಶದಿಂದ ಜಮೀನನ್ನು ಖರೀದಿ ಮಾಡಿರುತ್ತೇನೆ. ದಾವಾದ ಆಸ್ತಿ ಪ್ರತಿವಾದಿಗೆ ಹೇಗೆ ಬಂತು ಎಂಬುದರ ಬಗ್ಗೆ ಮಾಹಿತಿ ತಿಳಿದುಕೊಂಡಿರುತ್ತೇನೆ. ದಾವಾದ ಆಸ್ತಿ ಪಿತ್ರಾರ್ಜಿತವಾಗಿ ಬಂದಿರುತ್ತದೆ ಅಂತಾ ಹೇಳಿರುತ್ತಾರೆ. ಪ್ರತಿವಾದಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂಬುದಕ್ಕೆ ಯಾವ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೀರಿ ಅಂದರೆ, ಡ ಉತಾರ, ಎಂ ಆರ್, ಇ.ಸಿ., ಗಳನ್ನು ಪರಿಶೀಲನೆ ಮಾಡಿರುತ್ತೇನೆ. ಪ್ರತಿವಾದಿಗೆ ದಾವಾದ ಆಸ್ತಿ ಹೇಗೆ ಬಂದಿರುತ್ತದೆ ಎಂಬುದರ ಬಗ್ಗೆ ಕಾನೂನಿನ ಅಭಿಪ್ರಾಯ ಪಡೆದಿರುತ್ತೇನೆ. ಪ್ರತಿವಾದಿಗೆ ಆಸ್ತಿ ಹೇಗೆ ಬಂದಿರುತ್ತದೆ ಅಂತಾ ಹಿಂದಿನಿಂದ ನಾನು ನೋಡಿರುವುದಿಲ್ಲ. ಪ್ರತಿವಾದಿಯ ಕುಟುಂಬದಲ್ಲಿ ಎಷ್ಟು ಜನ ಇದ್ದಾರೆ ಎಂಬುದರ ಬಗ್ಗೆ ಪರಿಶೀಲನೆ ಮಾಡಿರುವುದಿಲ್ಲ. ಖರೀದಿ ಪೂರ್ವದಲ್ಲಿ ದಾವಾದ ಆಸ್ತಿಯನ್ನು ಖುದ್ದಾಗಿ ಹೋಗಿ ನೋಡಿರುತ್ತೇನೆ. ಖರೀದಿ ಮಾಡುವ ಪೂರ್ವದಲ್ಲಿ 02 ತಿಂಗಳ ಮುಂಚೆ ನೋಡಿರುತ್ತೇನೆ. ದಾವಾ ಆಸ್ತಿಯ ಜಮೀನಿನ ಚೆಕ್‌ಬಂಧಿ ಮತ್ತು ವಿಸ್ತೀರ್ಣದ ಬಗ್ಗೆ ಟಿಪ್ಪಣಿ ಮಾಡಿರುವುದಿಲ್ಲ. ದಾವಾದಲ್ಲಿ ತೋರಿಸಿರುವ ಚೆಕ್‌ಬಂಧಿಯಲ್ಲಿರುವ ಆಸ್ತಿ ಪ್ರತಿವಾದಿ ಕಬ್ಜೆಯಲ್ಲಿ ಇದೆ ಎಂಬುದರ ಬಗ್ಗೆ ಖಾತರಿ ಪಡಿಸಿಕೊಂಡಿರುತ್ತೀರಾ ಅಂದರೆ ಖಾತ್ರಿ ಪಡಿಸಿಕೊಂಡಿರುತ್ತೇನೆ. ಶಂಕರಪ್ಪ ಅರಗಂಜಿ ಇವರು ಪ್ರತಿವಾದಿಯ ಇದೇ ಆಸ್ತಿ ಅಂತಾ ತೋರಿಸಲು ಆರ್ ಟಿ ಸಿ ಮತ್ತು ಎಂ.ಆರ್. ಗಳನ್ನು ತೋರಿಸಿರುತ್ತಾರೆ. ಪಿಟಿಶೀಟ್‌ನ್ನು ತೋರಿಸಿದ್ದು ಅದರಲ್ಲಿ ಆಸ್ತಿಯ ಚೆಕ್‌ಬಂಧಿ ಮತ್ತು ಸರ್ವೆ ನಂಬರನ್ನು ತೋರಿಸಿರುತ್ತಾರೆ. ಪಿಟಿಶೀಟನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುವುದಿಲ್ಲ, ಹಾಜರ ಮಾಡಲು ತೊಂದರೆ ಇರುವುದಿಲ್ಲ, ಹಾಜರಪಡಿಸುತ್ತೇನೆ.

**4.** ದಾವಾದ ಚೆಕ್‌ಬಂಧಿಯಲ್ಲಿ ತೋರಿಸಿರುವ ಆಸ್ತಿಯು ಪ್ರತಿವಾದಿಯ ಮಾಲ್ಕೀಯ ಜಮೀನು ಅಲ್ಲಾ ಅಂದರೆ ಅದೇ ಮಾಲ್ಕಿಯ ಆಸ್ತಿ ಇರುತ್ತದೆ. ದಾವಾ ಆಸ್ತಿಯನ್ನು ಹೊರತುಪಡಿಸಿ ಪ್ರತಿವಾದಿಗೆ ಬೇರೆ ಆಸ್ತಿಗಳು ಇರುತ್ತವೆ ಎಂಬುದರ ಬಗ್ಗೆ ಮಾಹಿತಿ ತೆಗೆದುಕೊಂಡಿರುತ್ತೀರಾ ಅಂದರೆ ಇಲ್ಲಾ. ಪ್ರತಿವಾದಿಯ ಮನೆತನದಲ್ಲಿ ಅಕ್ಕ ತಂಗಿಯರು ಇರುವ ಬಗ್ಗೆ ಮಾಹಿತಿ ತೆಗೆದುಕೊಂಡಿರುವುದಿಲ್ಲ. ದಾವಾದ ಆಸ್ತಿಯ ಕ್ಷೇತ್ರ

34 ಗುಂಟೆ ಇರುತ್ತದೆ. ದಾವಾದ ಆಸ್ತಿ ಹಾವೇರಿಯಿಂದ ಡಿ.ಸಿ. ಆಫೀಸಗೆ ಹೋಗುವ ರಸ್ತೆಯಲ್ಲಿ ಇರುತ್ತದೆ. 2019-2020 ರಲ್ಲಿ ದಾವಾ ಆಸ್ತಿಯ ಮಾರುಕಟ್ಟೆ ಬೆಲೆ ಎಷ್ಟು ಇತ್ತು ಎಂಬುದರ ಬಗ್ಗೆ ನಾನು ದಾಖಲೆ ನೋಡಿರುವುದಿಲ್ಲ. ದಾವಾ ಆಸ್ತಿಯ ಪಶ್ಚಿಮಕ್ಕೆ ಚಂದ್ರಗೌಡ ಅರಗಂಜಿ ಎನ್ನುವವರು 06 ಎಕರೆ ಜಮೀನು ಖರೀದಿ ಮಾಡಿ, ಎನ್.ಎ. ಮಾಡಿರುತ್ತಾರೆ ಅಂದರೆ ನನಗೆ ಮಾಹಿತಿ ಇರುವುದಿಲ್ಲ. ಪ್ರತಿವಾದಿಯ ಆಸ್ತಿಯ ಪಶ್ಚಿಮಕ್ಕೆ ಇರುವ ಚಂದ್ರಗೌಡ ಅರಗಂಜಿ ಇವರ ಜಮೀನು 2014-2015 ರಲ್ಲಿ ಎನ್ ಎ ಪ್ಲಾಟ ಆಗಿರುತ್ತದೆ ಅಂದರೆ ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ಆಸ್ತಿಯ ಸುತ್ತ ಮುತ್ತಲೂ ಅನೇಕ ಜನರು ಜಮೀನು ಖರೀದಿ ಮಾಡಿ ಎನ್.ಎ. ಪ್ಲಾಟ ಮಾಡಿರುತ್ತಾರೆ ಅಂದರೆ ನನಗೆ ಗೊತ್ತಿರುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.